ಶ್ರೀ ಕೆ. ವಿರೂಪಾಕ್ಷಪ್ಪ :- ಸನ್ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಿಂದ ಕೆಎಂಸಿಯವರು ನ್ಯೂರೋ ಸರ್ಜನ್ ಬೇಕೆಂದು ಕೇಳಿದರು. ನಾನು ಇದರ ಬಗ್ಗೆ 8-10ಸಲ ಕೇಳಿದ್ದೇನೆ. ಅಲ್ಲಿ ರಾಷ್ಟ್ರೀಯ ಹೆದ್ದಾರಿ ಇದ್ದು ಆಕ್ಸಿಡೆಂಟ್‌ಗಳು ಬಹಳ ಆಗುವುದರಿಂದ, ಅಲ್ಲಿ ಹೆಚ್ಚಿನ ಜನರು ಸಾಯುತ್ತಿದ್ದಾರೆ. ಅದಕ್ಕೋಸ್ಕರ ನ್ಯೂರೋ ಸರ್ಜನ್ ಬೇಕು ಎಂದು ಹತ್ತು ಸಲ ಕೇಳಿದ್ದೇನೆ. ಮತ್ತೇ ನಾವೇನಾದರೂ ಉತ್ತರ ಕರ್ನಾಟಕ ಬಗ್ಗೆ ಮಾತನಾಡಿದರೆ ಅದಕ್ಕೆ ತಾವು ಅಡ್ಡ ಬರುತ್ತೀರಿ. ಇಲ್ಲಿ ಒಂದೇ ಒಂದು ದವಾಖಾನೆ ಇರುತ್ತದೆ.

ಅಧ್ಯಕ್ಷರು :- ನನಗೆ ಈಗ ಕನ್‌ವಿನ್ಸ್ ಆಗಿದೆ. ನಿಮ್ಮ ಭಾಗಕ್ಕೆ ನ್ಯೂರೋ ಸರ್ಜನ್ ವ್ಯವಸ್ಥೆಯನ್ನು ಮಾಡಿಸುತ್ತೇನೆ. ಈ ಬಗ್ಗೆ ನಾನೂ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆ.

ರಾಜ್ಯದಲ್ಲಿ 98-99ನೇ ಸಾಲಿನಲ್ಲಿ ಹೊಸ ಪ್ರೌಢಶಾಲೆಗಳನ್ನು ತೆರೆಯುವುದು.

231 (1580)

ಶ್ರೀ ಉಜ್ಜೆನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ 98-99ನೇ ಸಾಲಿನಲ್ಲಿ ಹೊಸ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ ತೆರೆಯಲು ಉದ್ದೇಶಿಸಿರುವ ಶಾಲೆಗಳ ಸಂಖ್ಯೆ ಎಷ್ಟು ?

ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1998-99ನೇ ಸಾಲಿನಲ್ಲಿ ಒಟ್ಟು 217 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಬಿ. ಬಣಕಾರ್ :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 1999-2000ನೇ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಕಳೆದ ಸಾಲಿನಲ್ಲಿ 717ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಬಹಳಷ್ಟು ಇದೆ. ಆದರೆ ಈ ಸಾಲಿನಲ್ಲಿ ಸರ್ಕಾರ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯಲಿಕ್ಕೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರಿಂದ ತಿಳಿಯ ಬಯಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು 1998-99ನೇ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ ಎಂದು ಕೇಳಿದ್ದಾರೆ. ಇದು ತಪ್ಪಾಗಿದೆ. ಅವರು 1999-2000ನೇ ಸಾಲಿನಲ್ಲಿ ಎಂದು ಹೇಳಬೇಕಾಗಿತ್ತು. 1998-99ನೇ ಸಾಲಿನಲ್ಲಿ ಎಷ್ಟು ಶಾಲೆಗಳನ್ನು ತೆರೆದಿದ್ದೇವೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಆದರೆ 1999-2000ನೇ ಸಾಲಿನಲ್ಲಿ ಹೊಸದಾಗಿ ಹೈಸ್ಕೂಲ್‌ಗಳನ್ನು ತೆರೆಯುವ ಸಾಧ್ಯತೆ ಇಲ್ಲ. ಅದಕ್ಕಾಗಿ ತಾವು ಬೇಜಾರು ಮಾಡಿಕೊಳ್ಳಬೇಡಿ. ಇದುವರೆಗೂ ನಾವು ತೀರ್ಮಾನ ಮಾಡಿರುವುದರಲ್ಲಿ ಹೊಸದಾಗಿ ಹೈಸ್ಕೂಲ್‌ಗಳನ್ನು ಕೊಡುವುದಕ್ಕೆ ಅವಕಾಶವಿಲ್ಲ.

ಶ್ರೀ ಯು.ಬಿ. ಬಣಕಾರ್ :- ಇದು ಕೊನೆಯ ವರ್ಷವಾಗಿರುವುದರಿಂದ ನಾವೇನೂ ಬೇಜಾರುಮಾಡಿಕೊಳ್ಳುವುದಿಲ್ಲ. ಆದರೆ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ದೃಷ್ಟಿಯಿಂದ ಈ ವಿಚಾರದ ಬಗ್ಗೆ ಮರುವಿಮರ್ಶೆ ಮಾಡಬೇಕು. ಹೊಸ ಪ್ರೌಢಶಾಲೆಗಳನ್ನು ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಸಚಿವರು ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಮತ್ತೆ ಖಾಸಗಿಯವರು ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವುದಕ್ಕೆ ತಾವು ಅವಕಾಶವನ್ನು ಏಕೆ ಕೊಡುತ್ತಿದ್ದೀರಿ ?

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಸರ್ಕಾರಿ ಶಾಲೆಗಳು ಇಲ್ಲದಿರುವ ಜಾಗದಲ್ಲಿ ಖಾಸಗಿಯವರು ಶಾಶ್ವತ ಅನುದಾನರಹಿತವಾಗಿ ಶಾಲೆಗಳನ್ನು ನಡೆಸುತ್ತೇವೆಂದು ಬಂದಾಗ ಕೆಲವು ಖಾಸಗಿಯವರಿಗೆ ಕೊಡುವಂತಹ ಅವಶ್ಯಕತೆ ಇದ್ದು ಕೊಟ್ಟಿದ್ದೇವೆ : ಬೇರೆ ಯಾರಿಗೂ ಕೊಟ್ಟಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ನಿಮ್ಮ ಸರ್ಕಾರಕ್ಕೆ ಮಾಡುವುದಕ್ಕೆ ಶಕ್ತಿ ಇಲ್ಲವೆಂದು ಹೇಳಿಕೊಳ್ಳಿ ಅದು ಬೇರೆ ಮಾತು. ಒಂದು ಪ್ರದೇಶಕ್ಕೆ ಒಂದು ಪ್ರೌಢಶಾಲೆಯ ಅಗತ್ಯ ಇದೆ ಎಂದರೆ ಅಲ್ಲಿಗೆ ಶಾಲೆಗಳನ್ನು ಕೊಡುತಕ್ಕಂತಹ ಕೆಲಸವನ್ನು ತಾವು ಮಾಡಬೇಕು. ಇಲ್ಲವೆಂದರೆ ನಮ್ಮ ಸರ್ಕಾರದಿಂದ ಆಗುವುದಿಲ್ಲ ಯಾರಾದರೂ ಮಾಡಿಕೊಳ್ಳಿ ಎಂದು ಪಾಲಿಸಿ ಮ್ಯಾಟರ್‌ನ್ನು ಮಾಡಿ. ಆಗ ಬೇಕಾದವರು ಅರ್ಜಿ ಹಾಕಿಕೊಳ್ಳುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ :- ಮಾನ್ಯ ಸ್ನೇಹಿತರು ಹೇಳಿದಂತೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಪ್ರಶ್ನೆ ಇಲ್ಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರಾಜ್ಯದಲ್ಲಿ 460ಪ್ರೌಢಶಾಲೆಗಳನ್ನು ಕೊಟ್ಟಿದ್ದೇವೆ. ತಾವು ಹೇಳಬೇಕಾದರೆ ಯೋಚನೆ ಮಾಡಿ ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಈ ವರ್ಷ ಕೊಡುವುದಕ್ಕಾಗುವುದಿಲ್ಲ ಎಂದು ತಾವು ಹೇಳಿದ್ದೀರಿ. ನೀವು ಖಾಸಗಿಯವರಿಗೆ ಕೊಡುತ್ತಿದ್ದೀರಿ : ಒಂದು ಪ್ರದೇಶಕ್ಕೆ ಅಗತ್ಯವಿದ್ದರೆ, ಅಗತ್ಯವಿರುವುದು ಹೌದು : ಸರ್ಕಾರದಿಂದ ನಾವು ಕೊಡುವುದಕ್ಕಾಗುವುದಿಲ್ಲ ಖಾಸಗಿಯವರಿಗೆ ಕೊಡುತ್ತೇವೆಂದು ತಾವು ಪ್ರಚಾರ ಮಾಡಿ. ಯಾರು ಬೇಕಾದರೂ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಪ್ರಚಾರ ಮಾಡುವ ಅವಶ್ಯಕತೆ ಇಲ್ಲ, ಅವರಾಗಿ ಬಂದು ಕೇಳಿದರೆ ಅವಶ್ಯಕತೆ ಇದ್ದ ಕಡೆ ನಾವು ನೋಡಿಕೊಂಡು ಕೊಡುತ್ತೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಪ್ರತಿ ಶಾಸಕರಿಗೆ ಒಂದು ಪ್ರೌಢಶಾಲೆಯನ್ನು ಕೊಡುತ್ತೇವೆಂದು ಹೇಳಿ, ಇವತ್ತಿನವರೆಗೂ ನಮ್ಮ ಧಾರವಾಡ ಕ್ಷೇತ್ರಕ್ಕೆ ಒಂದು ಪ್ರೌಢಶಾಲೆಯನ್ನು ಕೊಟ್ಟಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಿಮ್ಮಲ್ಲಿ ಸಿಬ್ಬಂದಿ ಇದ್ದರೆ ಆಯಾಯ ತಾಲ್ಲೂಕಿನಲ್ಲಿ, ನಿಮಗೆ ಅಗತ್ಯವಿರುವ ಕಡೆ ಒಂದೋ, ಎರಡೋ ಶಾಲೆಗಳನ್ನು ಈ ವರ್ಷ ನೀವೇ ಮಾಡಿಕೊಳ್ಳಿ ಎಂದು ಏನಾದರೂ ಸೂಚನೆಯನ್ನು ಕೊಟ್ಟಿದೀರಾ ಎಂದು ಕೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ನಮಗೆ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಅಕಸ್ಮಾತ್ ಟೀಚರ್ಸ್‌ಗಳು ಎಕ್ಸ್‌ಸ್ ಆಗಿ ನಿಮ್ಮ ತಾಲ್ಲೂಕಿನಲ್ಲಿದ್ದರೆ ಅಗತ್ಯವಿರುವ ಕಡೆ ನೀವು ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ. ಅದನ್ನು ತಾವು

ಮುಂದುವರಿಸುತ್ತೀರಾ ? ಅದನ್ನು ನಂತರ ಖಾಯಂ ಮಾಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಆ ರೀತಿಯಾಗಿ ಆರ್ಡರನ್ನು ಮಾಡುವುದಕ್ಕಾಗುವುದಿಲ್ಲ. ನಾವು ಏನೇ ಇದ್ದರೂ ಸರ್ಕಾರದಿಂದ ಮಂಜೂರು ಆದ ಮೇಲೆ ಅದಕ್ಕೆ ಒಂದು ರೆಕಗ್ನಿಷನ್ ಬರುತ್ತದೆ. ಆ ಸ್ಕೂಲ್ ಆಗುತ್ತದೆ. ಸುಮ್ಮನೆ ಯಾರೋ ಹೇಳಿದರು ಎಂದು ಶಾಲೆಯನ್ನು ಪ್ರಾರಂಭ ಮಾಡಿಕೊಂಡು ಹೋಗಿ ಎಂದು ಯಾರು ಹೇಳಿದರೋ ನನಗೆ ಗೊತ್ತಿಲ್ಲ. ಆ ರೀತಿ ಹೇಳುವುದು ಸರಿಯಲ್ಲ.

ಮೈಸೂರು ನಗರದ ಕುವೆಂಪು ನಗರದಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ

232(1501)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ

ಅ) ಮೈಸೂರು ನಗರದ ಕುವೆಂಪು ನಗರದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಜಾಗ ಕೊಂಡುಕೊಳ್ಳುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ . ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು)

ಆ) ಮೈಸೂರು ನಗರದ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ನಿವೇಶನ ಪಡೆಯುವ ಅಗತ್ಯತೆ ಇಲಾಖೆಯ ಪರಿಶೀಲನೆಯಲ್ಲಿದೆ. ಸ್ವಂತ ನಿವೇಶನ ಪಡೆಯಲು ಸೂಕ್ತಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಮೈಸೂರು—ಇವರಿಗೆ ಪತ್ರ ಬರೆಯಲಾಗಿದೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ಮೈಸೂರು ನಗರಕ್ಕೆ ಒಂದು ಕಾಲೇಜನ್ನು ಮಂಜೂರು ಮಾಡಿಕೊಟ್ಟರು. ಆ ಕಾಲೇಜಿಗೆ ಪೀಠೋಪಕರಣಗಳಾಗಲಿ, ಕೊಠಡಿಗಳಾಗಲಿ ಯಾವುದೂ ಇಲ್ಲ. ಶಿಕ್ಷಣಕ್ಕೆ ಮಹತ್ವವನ್ನು ಕೊಡತಕ್ಕಂಥವರು ಈಗ ಶಿಕ್ಷೆಯನ್ನು ಕೊಡುತ್ತಿದ್ದಾರೆ. ಈ ಸರ್ಕಾರ ಎಂದರೆ ತಪ್ಪಾಗಲಾರದು. ಈಗ ಅಲ್ಲಿ ಮಕ್ಕಳೆಲ್ಲಾ ಬೀದಿಯಲ್ಲಿ ಓದುವಂತಹ ಪರಿಸ್ಥಿತಿ ನಿರ್ಮಾಣ ಆಗಿ ಅವರೆಲ್ಲಾ ನಮ್ಮ ಮನೆಯ ಮುಂದೆ ಧರಣಿ ಹೂಡುವಂತಹ ಪರಿಸ್ಥಿತಿ ಉಲ್ಬಣವಾಗಿದೆ. ಇದಕ್ಕೆ ಕಾರಣರ್ಯಾರು ? ಪೂರ್ವಾಲೋಚನೆ ಇರತಕ್ಕಂತಹ ಯಾವುದೇ ಒಬ್ಬ ವಿದ್ಯಾಮಂತ್ರಿಗಳಿಗಾಗಲಿ ಇದು ನಿಜಕ್ಕೂ ಈ ಕ್ಷೇತ್ರಕ್ಕೆ ಶೋಭೆ ತರತಕ್ಕಂಥದ್ದಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ತಾನೇ ಮಂಜೂರಾತಿಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಕಾಲೇಜಿಗೆ ಜಾಗವನ್ನು ಸಹ ಕರುಣಿಸಿಲ್ಲ. ಕೊಠಡಿಗಳನ್ನು ಕಟ್ಟುವುದಕ್ಕೆ ಮಂಜೂರಾತಿಯೂ ಇಲ್ಲ. ಪಕ್ಕದ ಹಳ್ಳಿಗಳಿಂದ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಆ ಮಕ್ಕಳೆಲ್ಲಾ ಬೀದಿಯಲ್ಲಿ ಓದತಕ್ಕಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಹೊಣೆಯಾರು ? ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು :- ಇದಕ್ಕೆ ಹೊಣೆಗಾರರೆಂದರೆ ಮುಂದೆ ಕುಳಿತಿರಕ್ಕಂತಹ ಮಾನ್ಯ ನಂಜೇಗೌಡರು ಇರಬೇಕು ಅಥವಾ ಹಿಂದೆ ಕುಳಿತಿರುವ ಬಸವರಾಜ್‌ಪಾಟೀಲರು ಇರಬೇಕು.

ಶ್ರೀ ಬಿ.ಎ.ಮೊಯಿದ್ದೀನ್ :- ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದಲ್ಲಿ 150ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇವೆ. ಪ್ರಾಯಶಃ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಕೂಡ ಪ್ರಥಮದರ್ಜೆ ಕಾಲೇಜುಗಳು ಸರ್ಕಾರದ್ದು ಇಲ್ಲ. ಇದರಲ್ಲಿ 82 ಕಾಲೇಜುಗಳಿಗೆ ನಾವು ಈಗಾಗಲೇ ಸುಸಜ್ಜಿತವಾದ ಕಟ್ಟಡಗಳನ್ನು ಒದಗಿಸಿದ್ದೇವೆ. ಮತ್ತೆ 42 ಕಾಲೇಜುಗಳಿಗೆ ಈಗಾಗಲೇ ಕಟ್ಟಡಗಳು ನಿರ್ಮಾಣದ ಹಂತದಲ್ಲಿದೆ. 16 ಕಾಲೇಜುಗಳಿಗೆ ಕಟ್ಟಡವು ಇಲ್ಲ, ಜಾಗವೂ ಇಲ್ಲ, ಅದರಲ್ಲಿ ನಿಮ್ಮ ಮೈಸೂರು ಸಹ ಒಂದು. ನಾನು ಇರತಕ್ಕಂತಹ ಚಿತ್ರವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ.